2) <u>ಮೊದಲನೇ ಮಹಡಿಯಲ್ಲಿ:</u> ಪುರುಷರು ಮತ್ತು ಸ್ತ್ರೀಯರಿಗೆ ಪ್ರತ್ಯೇಕ ಡಾರ್ಮಿಟರಿ ಮತ್ತು ಶೌಚಾಲಯಗಳು.

3) <u>ಎರಡನೇ ಮಹಡಿಯಲ್ಲಿ:</u> 22 ಸಾಮಾನ್ಯ ಕೊಠಡಿಗಳು.

4) <u>ಮೂರನೇ ಮಹಡಿಯಲ್ಲಿ:</u> 6 ವಿ.ಐ.ಪಿ. ಕೊಠಡಿಗಳು.

(ಈ) (1) ನೆಲ ಮಹಡಿಯ ಪೊಲೀಸರ ಡಾರ್ಮಿಟರಿಯಲ್ಲಿ ಒಟ್ಟು 100 ಜನ ಪೊಲೀಸ್ ಸಿಬ್ಬಂದಿಗೆ ವಸತಿ ಸೌಲಭ್ಯ ಲಭ್ಯವಾಗುವುದು.

(2) ಮೊದಲನೇ ಮಹಡಿಯಲ್ಲಿ ಒಟ್ಟು 600 ಜನ ಭಕ್ತಾದಿಗಳಿಗೆ ವಸತಿ ಸೌಲಭ್ಯ ಲಭ್ಯವಾಗುವುದು.

(3) ಎರಡನೇ ಮಹಡಿಯಲ್ಲಿ ಒಟ್ಟು 100 ಜನ ಭಕ್ತಾದಿಗಳಿಗೆ ವಸತಿ ಸೌಲಭ್ಯ ಲಭ್ಯವಾಗುವುದು.

(4) ಮೂರನೇ ಮಹಡಿಯಲ್ಲಿ 20 ಜನ ಅತೀ ಗಣ್ಯ ವ್ಯಕ್ತಿಗಳಿಗೆ ವಸತಿ ಸೌಲಭ್ಯ ಲಭ್ಯವಾಗುವುದು.

(ಉ) ಈ ಬಗ್ಗೆ ಆಯುಕ್ತಾಲಯದಿಂದ ತಿರುವನಂತಪುರಂ ದೇವಸಂ ಬೋರ್ಡ್ ಇವರಿಗೆ ದಿನಾಂಕ:10.06.2014 ರಂದು ಪತ್ರ ಬರೆದು ವರದಿ ಪಡೆಯಲಾಗುತ್ತಿದೆ.

(ಊ) ಈ ಸಂಬಂಧ ಕೇರಳ ಉಚ್ಚನ್ಯಾಯಾಲಯದಲ್ಲಿ ತಡೆಯಾಜ್ಞೆ ಇರುವ ಬಗ್ಗೆ ಖಚಿತ ಪಡಿಸಿಕೊಂಡು, ತಡೆಯಾಜ್ಞೆಯನ್ನು ತೆರವುಗೊಳಿಸಲು ಕ್ರಮ ಜರುಗಿಸಲಾಗುವುದು.

ಮೆಟ್ರೋ ಎರಡನೇ ಹಂತದ ಕಾಮಗಾರಿ

83(87) ಶ್ರೀ ಗೋಪಾಲಯ್ಯ ಕೆ. (ಮಹಾಲಕ್ಷ್ಮೀ ಲೇಔಟ್):– ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಬೆಂಗಳೂರು ಮೆಟ್ರೋ ರೈಲು ಯೋಜನೆಯ 2ನೇ ಹಂತದ ಕಾಮಗಾರಿಗಳನ್ನು ಪ್ರಾರಂಭಿಸಲಾಗಿದೆಯೇ ;

(ಆ) ಇದರಲ್ಲಿ ಎಷ್ಟು ಕಿಲೋ ಮೀಟರ್ ಪೂರ್ಣಗೊಳಿಸಲಾಗಿದೆ ;

(ಇ) ಇದರ ಅಂದಾಜು ವೆಚ್ಚ ಎಷ್ಟು ;

(ಈ) ಈ ಯೋಜನೆಯಿಂದ ನಗರದ ಯಾವ ಯಾವ ಭಾಗಗಳಿಗೆ ಸೌಲಭ್ಯ ಲಭ್ಯವಾಗುತ್ತದೆ ;

(ಉ) ಇದಕ್ಕೆ ಕೇಂದ್ರ ಸರ್ಕಾರ ಅನುಮೋದನೆ ನೀಡಿದೆಯೇ ;

(ಊ) ಇದಕ್ಕಾಗಿ ಕೇಂದ್ರ ಸರ್ಕಾರ ನೀಡುವ ಅನುದಾನವೆಷ್ಟು ;

(ಋ) ಈ ಯೋಜನೆ ಯಾವಾಗ ಪೂರ್ಣಗೊಳ್ಳುತ್ತದೆ ?

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಯವರು):-

(ಅ) ಬೆಂಗಳೂರು ಮೆಟ್ರೋ ರೈಲು ಯೋಜನೆಯ 2ನೇ ಹಂತದ ಪ್ರಾಥಮಿಕ ಕೆಲಸಗಳನ್ನು ಪ್ರಾರಂಭಿಸಲಾಗಿದೆ.

ಆ) ಇನ್ನೂ ಸಿವಿಲ್ ಕೆಲಸಗಳನ್ನು ಪ್ರಾರಂಭಗೊಳಿಸಿರುವುದಿಲ್ಲ.

(ಇ) ಹಂತ-2 ರ ಯೋಜನಾ ಅಂದಾಜು ವೆಚ್ಚವು ರೂ. 26405.14 ಕೋಟಿಗಳಾಗಿರುತ್ತವೆ.

ಕ್ರಮ ಸಂ.	ಮಾರ್ಗದ ವಿವರ	ಲೈನಿನ ಉದ್ದ (ಕಿ.ಮೀ.ಗಳಲ್ಲಿ)	ನಿಲ್ದಾಣಗಳ ಸಂಖ್ಯೆ
	ಪೂರ್ವ-ಪಶ್ಚಿಮ ಮಾರ್ಗದ ವಿಸ್ತರಣೆ		
1	ಬೈಯಪ್ಪನಹಳ್ಳಿಯಿಂದ ಐಟಿಪಿಎಲ್ ವೈಟ್‌ಫೀಲ್ಡ್	15.50	13
2	ಮೈಸೂರು ರಸ್ತೆ ಟರ್ಮಿನಲ್ ನಿಂದ ಕೆಂಗೇರಿ	6.465	5
	ಉತ್ತರ-ದಕ್ಷಿಣ ಮಾರ್ಗದ ವಿಸ್ತರಣೆ		
3	ಹೆಸರುಘಟ್ಟ ಕ್ರಾಸ್‌ನಿಂದ ಬಿಐಇಸಿ	3.77	3
4	ಪುಟ್ಟೇನಹಳ್ಳಿ ಕ್ರಾಸ್‌ನಿಂದ ಅಂಜನಾಪುರ	6.29	5
	ಹೊಸ ಮಾರ್ಗ		
5	ಗೊಟ್ಟಿಗೆರೆ-ಐಐಎಮ್‌ಜಿ- ನಾಗವಾರ	21.25	18
6	ಆರ್.ವಿ.ರಸ್ತೆಯಿಂದ ಬೊಮ್ಮಸಂದ್ರ	18.82	16

ಬೈಯಪ್ಪನಹಳ್ಳಿಯಿಂದ ಐಟಿಪಿಎಲ್–ವೈಟ್‌ಫೀಲ್ಡ್ ಮಾರ್ಗದ ನಿಲ್ದಾಣಗಳು: 13			
ಜೋತಿಪುರಂ.	ಕೆ.ಆರ್.ಪುರಂ	ಮಾಹದೇವಪುರ	ಗರುಡಾಚಾರ್ಯಪಾಳ್ಯ
ದೊಡ್ಡನೆಕ್ಕುಂದಿ	ವಿಶ್ವೇಶ್ವರಯ್ಯ ಇಂಡಸ್ಟ್ರೀಯಲ್ ಏರಿಯಾ	ಕುಂದಲಹಳ್ಳಿ	ವೈದೇಹಿ ಆಸ್ಪತ್ರೆ
ಸತ್ಯಸಾಯಿ ಮೆಡಿಕಲ್ ಇನ್ಸ್ಟಿಟ್ಯೂಟ್	ಐಟಿಪಿಎಲ್	ಕಾಡುಗೋಡಿ	ಉಜ್ವಯ ವಿದ್ಯಾಲಯ
ವೈಟ್‌ಫೀಲ್ಡ್			

ಮೈಸೂರು ರಸ್ತೆ ಟರ್ಮಿನಲ್ ನಿಂದ ಕೆಂಗೇರಿ ಮಾರ್ಗದ ನಿಲ್ದಾಣಗಳು:06			
ನಾಯಂಡಹಳ್ಳಿ	ರಾಜರಾಜೇಶ್ವರಿನಗರ	ಜ್ಞಾನಭಾರತಿ	ಪಟ್ಟಣಗೆರೆ
ಮೈಲಸಂದ್ರ	ಕೆಂಗೇರಿ		
ಹೆಸರಘಟ್ಟ ಕ್ರಾಸ್‌ನಿಂದ ಬಿಐಇಸಿ:03 ನಿಲ್ದಾಣಗಳು			
ಮಂಜುನಾಥನಗರ	ಜಿಂದಾಲ್	ಬಿ ಐ ಇ ಸಿ ಟರ್ಮಿನಲ್	
ಪುಟ್ಟೇನಹಳ್ಳಿ ಕ್ರಾಸ್‌ನಿಂದ ಅಂಜನಾಪುರ ಟೌನ್‌ಪಿಪ್ (ಎಸ್‌ಐಸಿಇ ರಸ್ತೆವರೆಗೆ)			
ಅಂಜನಾಪುರ	ಕೃಷ್ಣಲೀಲಾ ಪಾರ್ಕ್	ವಾಜರಹಳ್ಳಿ	ತಲಘಟ್ಟಪುರ ರಸ್ತೆ ಕ್ರಾಸ್
ಅಂಜನಾಪುರ ಟೌನ್‌ಷಿಪ್			

ಗೊಟ್ಟಿಗೆರೆ– ಐಐಎಮ್‌ಬಿ– ನಾಗವಾರ: 18 ಇವುಗಳಲ್ಲಿ 6 ಮೇಲ್ಸೇತುವೆ ನಿರ್ಮಾಣಗಳು ಮತ್ತು 12 ಸುರಂಗಮಾರ್ಗದ ನಿರ್ಮಾಣಗಳೂ ಕ್ರಮವಾಗಿ ಸೇರಿವೆ			
ಗೊಟ್ಟಿಗೆರೆ	ಹುಳಿಮಾವು	ಐಐಎಂಬಿ	ಜೆ.ಪಿ,ನಗರ 4ನೇ ಹಂತ
ಜಯದೇವ ಆಸ್ಪತ್ರೆ	ಸ್ವಾಗತ ರಸ್ತೆ	ಡೈರಿ ಸರ್ಕಲ್ ಕ್ರಾಸ್	ಮೈಕೋ ಇಂಡಸ್ಟ್ರೀಸ್
ವಲ್ಲರಾ ಜಂಕ್ಷನ್	ಎಂ.ಜಿ.ರಸ್ತೆ (ಬದಲಾವಣೆ)	ಶಿವಾಜಿನಗರ	ಕಂಟೋನ್ಮೆಂಟ್ ರೈಲ್ವೆ ನಿರ್ಮಾಣ
ಪಾಟರಿ ಟೌನ್	ಟ್ಯಾನರಿ ರಸ್ತೆ	ವೆಂಕಟೇಶಪುರ	ಅರಬಿಕ್ ಕಾಲೇಜ್
ನಾಗವಾರ			

ಆರ್.ವಿ.ರಸ್ತೆಯಿಂದ ಬೊಮ್ಮಸಂದ್ರ :16 ನಿರ್ಮಾಣಗಳು			
ಆರ್‌ವಿ ರಸ್ತೆ	ರಾಗಿಗುಡ್ಡ ದೇವಸ್ಥಾನ	ಜಯದೇವ ರಸ್ತೆ (ಬದಲಾವಣೆ)	ಬಿಟಿಎಂ ಲೇಔಟ್
ಸಿಲ್ಕ್ ಯಾರ್ಡ್	ಹೆಚ್ ಎಸ್ ಆರ್ ಲೇಔಟ್	ಆಕ್ಸ್‌ಫರ್ಡ ಕಾಲೇಜ್	ಮುನೇಶ್ವರ ನಗರ
ಚಿಕ್ಕ ಬೇಗೂರು	ಬಸಾಪುರ ರಸ್ತೆ	ಹೊಸ ರಸ್ತೆ	ಎಲೆಕ್ಟ್ರಾನಿಕ್ ಸಿಟಿ1
ಎಲೆಕ್ಟ್ರಾನಿಕ್ ಸಿಟಿ	ಹುಸ್ಕೂರ ರಸ್ತೆ	ಹೆಬ್ಬಗೋಡಿ	ಬೊಮ್ಮಸಂದ್ರ

(ಉ) ಹೌದು.

(ಊ) ಕೇಂದ್ರ ಸರ್ಕಾರವು ಈಕ್ವಿಟಿ ರೂಪದಲ್ಲಿ ರೂ. 3870.00 ಕೋಟಿ ಹಾಗೂ ಬಡ್ಡಿರಹಿತ ಸಾಲರೂಪದಲ್ಲಿ ರೂ. 1421.00 ಕೋಟಿಗಳ ಅನುದಾನವನ್ನು ನೀಡಲಿದೆ.

(ಋ) ಈ ಯೋಜನೆಯು 2019ಕ್ಕೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ.